# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 293 |
| ಸದಸ್ಯರ ಹೆಸರು | ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14.09.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂ ಮಂಜೂರಾತಿ ಪಡೆದ ಭೂಮಿಯ ಪೋಡಿಗಾಗಿ ಕಳೆದ 5 ವರ್ಷಗಳಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು; | 5 ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಮಂಜೂರಾತಿಯಂತೆ ಪೋಡಿ ದುರಸ್ತಿಗಾಗಿ ಸ್ವೀಕೃತವಾದ ದರಖಾಸ್ತು ಪೋಡಿ ಕಡತಗಳ ಬಾಬ್ತು ವಿವರ ಈ ಕೆಳಕಂಡಂತಿದೆ. |
| ಆ) | ಪೋಡಿಗಾಗಿ ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಎಷ್ಟು; ನಿಗದಿತ ಕಾಲಮಿತಿ ಮುಗಿದರೂ ಪೋಡಿ ಮಾಡದೆ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಬಾಕಿಯಿರುವ ಅರ್ಜಿಗಳು ಎಷ್ಟು ದಿನಗಳಿಂದ ಬಾಕಿಯಿವೆ ಎಂಬ ವಿವರ ನೀಡುವುದು) | (see tables and text below) |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಆರಂಭ ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ |
|---|---|---|---|---|---|---|---|
| 1 | ಬೆಂಗಳೂರು ನಗರ | ಬೆಂ. ಉತ್ತರ | 06 | 12 | **18** | 15 | 03 |
| 2 | | ಬೆಂ. ದಕ್ಷಿಣ | 39 | 34 | **73** | 62 | 11 |
| 3 | | ಬೆಂ. ಪೂರ್ವ | 09 | 58 | **67** | 54 | 13 |
| 4 | | ಯಲಹಂಕ | 12 | 108 | **120** | 87 | 33 |
| 5 | | ಆನೇಕಲ್ | 38 | 22 | **60** | 07 | 53 |
| | **ಒಟ್ಟು** | | **104** | **234** | **338** | **225** | **113** |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಆರಂಭ ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ |
|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | 12 | 167 | **179** | 136 | 43 |
| 2 | | ದೇವನಹಳ್ಳಿ | 56 | 449 | **505** | 377 | 128 |
| 3 | | ದೊಡ್ಡಬಳ್ಳಾಪುರ | 16 | 216 | **232** | 203 | 29 |
| 4 | | ನೆಲಮಂಗಲ | 10 | 69 | **79** | 61 | 18 |
| | **ಒಟ್ಟು** | | **94** | **901** | **995** | **777** | **218** |

ಮಂಜೂರಾದ ಜಮೀನುಗಳ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ ಕೊಂಡು ಮಂಜೂರಿಯಂತೆ ಪೋಡಿ ಮಾಡಲು ಭೂಮಾಪನ ಇಲಾಖೆ ಸುತ್ತೋಲೆ **ಸಂ, ತಾಂತ್ರಿಕ.ದರಖಾಸ್ತು.ಪೋಡಿ. ಆಂದೋಲನ.40/2008-09 ದಿನಾಂಕ: 20-10-2008** ರಲ್ಲಿ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ತಹಶೀಲ್ದಾರರು, ಉಪ ವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ದೃಢೀಕರಿಸಿ ಪೋಡಿ ಅಳತೆ ಪ್ರಕರಣವನ್ನು ಭೂಮಾಪನ ಶಾಖೆಗೆ ಕಳುಹಿಸಿದ ನಂತರ ಭೂಮಾಪನ ಶಾಖೆಯಲ್ಲಿ ಅಳತೆ ಮಾಡಿ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡುವಂತೆ ಇಲಾಖೆ ಸುತ್ತೋಲೆ **ಸಂ,ತಾಂತ್ರಿಕ. ಆಡಳಿತ.ಸುತ್ತೋಲೆ.29/2009-10 ದಿನಾಂಕ:-25-1-2010** ರಲ್ಲಿ ಸೂಚಿಸಲಾಗಿದೆ. ಸದರಿ ಅಳತೆಯಾದ ಪ್ರಕರಣಗಳಲ್ಲಿ ಮಂಜೂರಾತಿ ಮತ್ತು ಅನುಭವ ಸಾಮ್ಯವಿರುವ ಎಲ್ಲಾ ಪ್ರಕರಣಗಳಿಗೆ, ಮಂಜೂರಾದ ವಿಸ್ತೀರ್ಣ ಮತ್ತು ಮಂಜೂರಾತಿ ವಿಸ್ತೀರ್ಣಕ್ಕಿಂತ ಸ್ವಾಧೀನ/ಅನುಭವದ ವಿಸ್ತೀರ್ಣ ಕಡಿಮೆಯಿರುವ ಪ್ರಕರಣಗಳಲ್ಲಿ ಒಪ್ಪಿಗೆ ಮೇರೆಗೆ ಏಕಕಾಲದಲ್ಲಿ ಕ್ರಮ ಕೈಗೊಂಡು, ಹೊಸ ನಂಬರು ನೀಡಿ ಪ್ರತ್ಯೇಕ ಪಹಣಿ ಸೃಜಿಸಲು ಸೂಚಿಸಲಾಗಿದೆ.

ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ಮಾಡುವಲ್ಲಿ ವಿಳಂಬವಾಗಬಹುದೆಂದು ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳ ಪ್ರಕರಣದಲ್ಲಿ ಅರ್ಜಿದಾರರಿಗೆ ಆಗಿರುವ ಭೂ ಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ ಪರಿಶೀಲಿಸಿ, ನಮೂನೆ 1 ರಿಂದ 5 ಭರ್ತಿ ಮಾಡಿ ಧೃಡೀಕರಿಸಿ ಏಕವ್ಯಕ್ತಿಗೆ ಪೋಡಿ ಮಾಡಲು ಸುತ್ತೋಲೆ ಸಂಖ್ಯೆ **ಕಂಇ 8 ಎಲ್‌ಜಿಪಿ 2016 ದಿನಾಂಕ: 20-06-2016 ಹಾಗೂ ತಿದ್ದುಪಡಿ ಕಂಇ 8 ಎಲ್‌ಜಿಪಿ 2016 (ಭಾಗ-1) ದಿನಾಂಕ: 18-07-2016** ರಲ್ಲಿ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಪೋಡಿ ದುರಸ್ತಿ ಕ್ರಮ ಕೈಗೊಂಡು, ಹೊಸ ನಂಬರು ನೀಡಿ ಪ್ರತ್ಯೇಕ ಪಹಣಿ ಸೃಜಿಸಲು ಸೂಚಿಸಲಾಗಿದೆ.

**ಇ)** ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಯಾವ ಅಧಿಕಾರಿಯ ಹಂತದಲ್ಲಿ ಹೆಚ್ಚು ಪೋಡಿ ಅರ್ಜಿಗಳು ಬಾಕಿಯಿರುತ್ತವೆ; (ಸದರಿ ಅಧಿಕಾರಿಗಳ ವಿವರ ನೀಡುವುದು)

ಬೆಂಗಳೂರು ನಗರ/ಗ್ರಾಮಾಂತರ ಜಿಲ್ಲೆಯಲ್ಲಿ ತಹಶೀಲ್ದಾರ್/ ಭೂದಾಖಲೆಗಳ ಸಹಾಯಕ ನಿರ್ದೇಶಕರ ಹಂತದಲ್ಲಿ ಬಾಕಿ ಇರುವ ದರಖಾಸ್ತು ಪೋಡಿ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

**ಜಿಲ್ಲೆ : ಬೆಂಗಳೂರು ನಗರ**

| ಕ್ರ. ಸಂ. | ತಾಲ್ಲೂಕು | ಭೂದಾಖಲೆಗಳ ಸಹಾಯಕ ನಿರ್ದೇಶಕರ ಬಳಿ ಬಾಕಿ | | | ತಹಶೀಲ್ದಾರ್ (ಕಂದಾಯ ಶಾಖೆಯಲ್ಲಿ )ಬಳಿ ಬಾಕಿ | | |
|---|---|---|---|---|---|---|---|
| | | ಅಳತೆಗಾಗಿ ಬಾಕಿ | ಅಳತೆ ನಂತರ ಇಲಾಖೆಯಲ್ಲಿ ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಸ್ಥಳ ಬದಲಾವಣೆಯಾದ ಪ್ರಕರಣಗಳು | ಮಂಜೂರಿ ವಿಸ್ತೀರ್ಣದಲ್ಲಿ ವ್ಯತ್ಯಾಸದ ಪ್ರಕರಣಗಳು | ಅನುಭವವಿಲ್ಲದ ಪ್ರಕರಣಗಳು |
| 1 | ಬೆಂ.ಉತ್ತರ | 2 | - | 1 | 0 | 1 | 0 |
| 2 | ಬೆಂ.ದಕ್ಷಿಣ | 5 | 6 | 0 | 0 | 0 | 0 |
| 3 | ಬೆಂ.ಪೂರ್ವ | 5 | - | 8 | 0 | 8 | 0 |
| 4 | ಯಲಹಂಕ | 1 | 24 | 8 | 4 | 4 | 0 |
| 5 | ಆನೇಕಲ್ | 07 | 05 | 41 | 20 | 21 | 0 |
| | **ಒಟ್ಟು** | **20** | **35** | **58** | **24** | **34** | **0** |

**ಜಿಲ್ಲೆ : ಬೆಂಗಳೂರು ಗ್ರಾಮಾಂತರ**

| ಕ್ರ. ಸಂ. | ತಾಲ್ಲೂಕು | ಭೂದಾಖಲೆಗಳ ಸಹಾಯಕ ನಿರ್ದೇಶಕರ ಬಳಿ ಬಾಕಿ | | | ತಹಶೀಲ್ದಾರ್ (ಕಂದಾಯ ಶಾಖೆಯಲ್ಲಿ ) ಬಳಿ ಬಾಕಿ | | |
|---|---|---|---|---|---|---|---|
| | | ಅಳತೆಗಾಗಿ ಬಾಕಿ | ಅಳತೆ ನಂತರ ಇಲಾಖೆಯಲ್ಲಿ ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಸ್ಥಳ ಬದಲಾವಣೆಯಾದ ಪ್ರಕರಣಗಳು | ಮಂಜೂರಿ ವಿಸ್ತೀರ್ಣದಲ್ಲಿ ವ್ಯತ್ಯಾಸದ ಪ್ರಕರಣಗಳು | ಅನುಭವವಿಲ್ಲದ ಪ್ರಕರಣಗಳು |
| 1 | ಹೊಸಕೋಟೆ | 19 | 3 | 21 | - | - | - |
| 2 | ದೇವನಹಳ್ಳಿ | 109 | 10 | 9 | - | - | - |
| 3 | ದೊಡ್ಡಬಳ್ಳಾಪುರ | 23 | 4 | 2 | - | - | - |
| 4 | ನೆಲಮಂಗಲ | 02 | 10 | 6 | - | - | - |
| | **ಒಟ್ಟು** | **153** | **27** | ***38** | **-** | **-** | **-** |

***ಸದರಿ 38 ಪ್ರಕರಣಗಳಲ್ಲಿ ಕಂದಾಯ ಶಾಖೆಯಿಂದ ಮೂಲ ಮಂಜೂರಿ ಕಡತ ಕೋರಲಾಗಿರುತ್ತದೆ.**

| | | |
|---|---|---|
| ಈ) | ಭೂಮಂಜೂರಾತಿಯ ನೈಜತೆಯನ್ನು ಪರಿಶೀಲಿಸುವ ಅಧಿಕಾರಿಯಾಗಿ ಸರ್ಕಾರ ಯಾರನ್ನು ಗೊತ್ತುಪಡಿಸಿದೆ (ಇದಕ್ಕೆ ಸಂಬಂಧಿಸಿದ ಕಂಇ 8 ಎಲ್‌ಜಿಪಿ 2016ರ ಸುತ್ತೋಲೆಯನ್ನು ನೀಡುವುದು) ; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 08 ಎಲ್‌ಜಿಪಿ 2016, ದಿನಾಂಕ: 20.06.2016 ರಲ್ಲಿ ತಿಳಿಸಿರುವಂತೆ, ಮೂಲ ಮಂಜೂರಿ ವಹಿ ಹಾಗೂ ಸಾಗುವಳಿ ಚೀಟಿ ವಿತರಣಾ ವಹಿಗಳು ಸಂಬಂಧಿಸಿದ ತಹಶೀಲ್ದಾರ್ ಕಛೇರಿಗಳಲ್ಲಿ ಲಭ್ಯವಿಲ್ಲದೇ ಶಿಥಿಲವಾಗಿದ್ದಲ್ಲಿ, ಸದರಿ ಜಮೀನು ಮಂಜೂರಾದ ಕಾಲದಿಂದಲೂ ಹಕ್ಕು ದಾಖಲೆಗಳಲ್ಲಿ ಅಂದರೆ, ಕೇತುವಾರುವಹಿ, ಐ.ಎಲ್.ವಹಿ, ಸೆಟಲ್‌ಮೆಂಟ್ ವಹಿ, ಆರ್.ಆರ್. ವಹಿ, ಮ್ಯುಟೇಷನ್ ವಹಿ ಹಾಗೂ ಆರ್.ಟಿ.ಸಿ. ವಹಿಗಳಲ್ಲಿ ನಿರಂತರವಾಗಿ ಹಕ್ಕು ದಾಖಲಾಗಿರುವ ಬಗ್ಗೆ ಯಾವುದು ಲಭ್ಯವಿದೆಯೋ ಆ ದಾಖಲೆಗಳನ್ನು ಆಧರಿಸಿ, ಮಂಜೂರಿ ನೈಜತೆ ಖಾತ್ರಿಯಾದಲ್ಲಿ ಜಿಲ್ಲಾ ಮಟ್ಟದ ಸಮಿತಿಯು ಗೈರು ವಿಲೇ ಕಡತ ತಯಾರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಬಹುದಾಗಿರುತ್ತದೆ. ಸುತ್ತೋಲೆ ಪ್ರತಿಯನ್ನು **ಅನುಬಂಧ**ದಲ್ಲಿ ಇರಿಸಿದೆ. |
| ಉ) | ಭೂ ಮಂಜೂರಾತಿಯ ನೈಜತೆಯನ್ನು ಪರಿಶೀಲಿಸುವ ಅಧಿಕಾರ ತಹಶೀಲ್ದಾರರಿಗೆ ಇದ್ದರೂ, ಸದರಿ ಕಡತಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | |
| ಊ) | ಭೂ ಮಂಜೂರಾತಿಯನ್ನು ಪಡೆದ ಭೂಮಿಯ ಪೋಡಿಗಾಗಿ ಬಂದ ಅರ್ಜಿಗಳ ಸಕಾಲದಲ್ಲಿ ವಿಲೇವಾರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಯಾವುವು? | **ಭೂ ಮಂಜೂರಿಯಾದ ಭೂಮಿಯ ಪೋಡಿ ಅರ್ಜಿಗಳ ಸಕಾಲದಲ್ಲಿ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು**<br>1) ಭೂಮಾಪನ ಇಲಾಖೆಯಲ್ಲಿ ಮೋಜಿಣಿ ತಂತ್ರಾಂಶದ ಮುಖಾಂತರ ಅರ್ಜಿಗಳ ಸ್ವೀಕೃತಿ, ಅರ್ಜಿಗಳ ಹಂಚಿಕೆ, ಅಳತೆ ಮಾಡಿ ಅಪ್‌ಲೋಡ್ ಮಾಡುವುದು, ಕಡತಗಳ ಪರಿಶೀಲನೆ ಮೊದಲಾದ ಎಲ್ಲಾ ಅಳತೆ ಪ್ರಕ್ರಿಯೆಗಳನ್ನು ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಆನ್‌ಲೈನ್ ಮೂಲಕ ನಿರ್ವಹಿಸಲಾಗುತ್ತಿದೆ.<br>2) ನಿಯಮಿತವಾಗಿ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3) ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4) ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕ ರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6) 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ 01-02-2021 ಮತ್ತು 02-02-2021 ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನಂತರ ಉತ್ತೀರ್ಣವಾದ 841 ಜನರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಿದ್ದು, ನಿಯೋಜಿತ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲಾಖಾ ತರಬೇತಿ ಪೂರ್ಣ ಗೊಳಿಸಿರುವ 438 ಜನ ಪರವಾನಗಿ ಭೂಮಾಪಕರಿಗೆ ವಿವಿಧ ತಾಲ್ಲೂಕುಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯೋಜನೆ ಮಾಡಲಾಗಿದೆ. ಪ್ರಸ್ತುತ 508 ಪರವಾನಗಿ ಭೂಮಾಪಕರು ತರಬೇತಿ ಪಡೆಯುತ್ತಿದ್ದು, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದೆ.<br>7) ಅಗತ್ಯತೆಗನುಗುಣವಾಗಿ ಹೊಸದಾಗಿ 3000 ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲು ದಿನಾಂಕ 28-12-2021 ರಂದು ಅರ್ಜಿಗಳನ್ನು |

| | | |
|---|---|---|
| | | ಆಹ್ವಾನಿಸಲಾಗಿದ್ದು, ಪ್ರವೇಶ ಪರೀಕ್ಷೆ ನಡೆಸಿ ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದೆ.<br>8) ನಿಯಮಗಳಿಗೆ ಅಗತ್ಯ ತಿದ್ದುಪಡಿ ತಂದು ಸರ್ಕಾರಿ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರುಗಳಿಗೆ ಅಳತೆ ಅರ್ಜಿಗಳನ್ನು ಸಮರ್ಪಕ ರೀತಿಯಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಇದರಿಂದ ಭೂಮಾಪಕರ ಕಾರ್ಯ ಒತ್ತಡ ಕಡಿಮೆಯಾಗಿ, ಅಳತೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |

**ಸಂಖ್ಯೆ: ಕಂಇ 181 ಎಸ್‌ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು

# ಕರ್ನಾಟಕ ಸರ್ಕಾರ

ಸಂಖ್ಯೆ: ಕಂ.ಇ 08 ಎಲ್‌ಜಿಪಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20-06-2016.

## ಸುತ್ತೋಲೆ

ವಿಷಯ : ಭೂ ಮಂಜೂರಿ ಪ್ರಕರಣಗಳ ಮಿಸ್ಸಿಂಗ್ ಕಡತಗಳ ನಿರ್ವಹಣೆ ಬಗ್ಗೆ.

ಉಲ್ಲೇಖ :
1) ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 19100/2015 (ಕೆಎಲ್‌ಆರ್-ಆರ್‌ಇಜಿ) ಆದೇಶ ದಿನಾಂಕ:30-11-2015.
2) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂ.ಇ.74.ಭೂ.ದಾ.ಸ.2002 ದಿನಾಂಕ:30-10-2002.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.74.ಎಲ್.ಜಿ.ಪಿ.2009 ದಿನಾಂಕ: 17-09-2009.
4) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂ.ಇ.283.ಭೂ.ದಾ.ಸ.2010 ದಿನಾಂಕ: 23-11-2010.
5) ಸರ್ಕಾರದ ಸುತ್ತೋಲೆ ಸಂಖ್ಯೆ: ಕಂ.ಇ.286.ಎಲ್.ಜಿ.ಪಿ.2012 ದಿನಾಂಕ: 28-09-2012.
6) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ತಾಂ.ದ.ಪೋಡಿ ಆಂದೋಲನ 40/2008-09 ದಿನಾಂಕ: 20-10-2008.
7) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ತಾಂ.ಆಡಳಿತ.ಸುತ್ತೋಲೆ.29/2009-10 ದಿನಾಂಕ: 25-01-2010.
8) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ತಾಂ.ಆಡಳಿತ.ಸುತ್ತೋಲೆ 01/2012-13 ದಿನಾಂಕ: 12-03-2013 ಹಾಗೂ 31-07-2013.

* * *

ಭೂಮಾಪನ ಇಲಾಖೆಗೆ ಪೋಡಿ ಅಳತೆಗಾಗಿ ಕಳುಹಿಸುವ ಕಡತಗಳಲ್ಲಿ ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ನಿಯಮ 72 ರ ಪ್ರಕಾರ ಪೋಡಿ ಕಡತಗಳಲ್ಲಿ, ಹೊಂದಿರಬೇಕಾದ ಅಗತ್ಯ ದಾಖಲೆಗಳ ಬಗ್ಗೆ ಹಾಗೂ ಮೂಲ ಮಂಜೂರಿ ಕಡತಗಳು ಲಭ್ಯವಿಲ್ಲದ ಪ್ರಕರಣಗಳಲ್ಲಿ ತೆಗೆದುಕೊಳ್ಳಬೇಕಾದ ಅಂದರೆ, ಭೂ ಮಂಜೂರಿ ಪ್ರಕರಣಗಳ ಮಿಸ್ಸಿಂಗ್ ಕಡತಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಉಲ್ಲೇಖಿತ (2) (3) ಮತ್ತು (5) ರ ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಿರುವುದು ಸರಿಯಷ್ಟೆ.

ಅಲ್ಲದೆ, ಮಾಜಿ ಇನಾಂ ಗ್ರಾಮಗಳಲ್ಲಿ ಮಂಜೂರಾದ ಪ್ರಕರಣಗಳ ಬಾಬ್ತು ಪೋಡಿ ಮಾಡಿ ಹೊಸ ಸ.ನಂ ನೀಡುವ ಹಂತದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಭೂಮಾಪನ ಇಲಾಖಾ ಆಯುಕ್ತರ ಉಲ್ಲೇಖಿತ (6) ರ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಸೂಚನೆಗಳನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಬಗೆಯ ಪೋಡಿ ಪ್ರಕರಣಗಳ ಪೋಡಿ ದುರಸ್ತಿ ಸಂದರ್ಭದಲ್ಲಿ ಉಲ್ಲೇಖಿತ (6) ಮತ್ತು (7) ರ ಭೂಮಾಪನಾ ಇಲಾಖಾ ಆಯುಕ್ತರ ಸುತ್ತೋಲೆಗಳ ಸೂಚನೆಗಳಂತೆ ಅಗತ್ಯ ಕ್ರಮ ಜರುಗಿಸಿ ತದನಂತರ ಮಿಸ್ಸಿಂಗ್ ಕಡತಗಳ ನಿರ್ವಹಣೆ ಬಗ್ಗೆ ಕ್ರಮವಹಿಸುವ ಕುರಿತಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಮುಂದುವರೆದು, ಭೂಮಾಪನಾ ಇಲಾಖಾ ಆಯುಕ್ತರ ಹಾಗೂ ಸರ್ಕಾರದ ಸುತ್ತೋಲೆಗಳಲ್ಲಿ ನಮೂದಿಸಿರುವ ಎಲ್ಲಾ ಸೂಚನೆಗಳನ್ನು ಅನುಸರಿಸಿ ಅಳತೆ ಕಾರ್ಯ ನಿರ್ವಹಿಸುವಲ್ಲಿ ವಿಳಂಬವಾಗುತ್ತಿದೆ ಎಂಬ ಬಗ್ಗೆ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ದೂರುಗಳು ಸರ್ಕಾರಕ್ಕೆ ಸ್ವೀಕೃತವಾದ ಹಿನ್ನೆಲೆಯಲ್ಲಿ ಹಾಗೂ ತುರ್ತಾಗಿ ಜಮೀನು ಮಾರಾಟ ಮಾಡಬೇಕಾದಂತಹ ಸಂದರ್ಭಗಳಲ್ಲಿ ಅಳತೆ ಕಾರ್ಯ ವಿಳಂಬವಾದಲ್ಲಿ ಮಾರಾಟ ಪ್ರಕ್ರಿಯೆ ಮುಂದುವರೆಸಲು ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ, ಇಂತಹ ತೊಂದರೆಗಳನ್ನು ನಿವಾರಿಸಲು ಸರ್ಕಾರ/ಆಯುಕ್ತರು, ಭೂಮಾಪನ ರವರು ಹೊರಡಿಸಿರುವ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು ತುರ್ತು ಅಳತೆ ಕಾರ್ಯ ನಿರ್ವಹಿಸಬೇಕಾದ ಅನಿವಾರ್ಯ ಪ್ರಸಂಗಗಳಲ್ಲಿ ವಿನಾಯಿತಿ ನೀಡಬೇಕಾದ ಅವಶ್ಯಕತೆಗಳನ್ನು ಸರ್ಕಾರ ಮನಗಂಡು ಸದರಿ [illegible] ಪ್ರಕರಣಗಳಲ್ಲಿ ವ್ಯಕ್ತಿ ಕೋರಿಕೆ ಅನುಸಾರ ತುರ್ತಾಗಿ ಅಳತೆ ಮಾಡುವ ಅನಿವಾರ್ಯತೆ ಕಂಡು ಬಂದಲ್ಲಿ [illegible] ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆದು ಅಳತೆ ಮತ್ತು ದುರಸ್ತಿ ಕಾರ್ಯ ನಿರ್ವಹಿಸಲು ಉಲ್ಲೇಖಿತ (4) ರಲ್ಲಿ ಸುತ್ತೋಲೆ ಹೊರಡಿಸಿರುತ್ತದೆ.

Scanned with CamScanner

[illegible] ರಲ್ಲಿ ಗೈರುಮಿಲೇ ಕಡತ [illegible] ಕಡ್ಡಾಯವಾಗಿ [illegible] ವಹಿ ಹಾಗೂ ಸಾಗುವಳಿ ಚೀಟಿ ವಿತರಣಾ ವಹಿ [illegible] ಸೂಚಿಸಲಾಗಿದೆ.

ಕೆಲವು ಗೈರುಮಿಲೇ ಕಡತಗಳ ಮೋಜಣಿ ಕೆಲಸವನ್ನು ನಿಗದಿತ ಅವಧಿಯ ಒಳಗಾಗಿ ಪೂರೈಸುವಂತೆ ಘನ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಲಾದ ಕೆಲವು ರಿಟ್ ಅರ್ಜಿಗಳ ಪ್ರಕರಣಗಳಲ್ಲಿ ಆದೇಶಿಸಿರುವ ಸಂದರ್ಭಗಳಲ್ಲಿ ಮೂಲ ಮಂಜೂರಿ ವಹಿ ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಮೂಲ ಸಾಗುವಳಿ ಚೀಟಿ ವಿತರಣಾ ವಹಿ ಅಥವಾ ಮೂಲ ಮಂಜೂರಿ ವಹಿಗಳಲ್ಲಿ ಯಾವುದಾದರೊಂದು ಇದ್ದಲ್ಲಿ, ಜಿಲ್ಲಾ ಮಟ್ಟದ ಸಮಿತಿಯು ಗೈರುಮಿಲೇ ಕಡತಗಳ ಪುನರ್ ರಚನೆ ಬಗ್ಗೆ ಉಲ್ಲೇಖಿತ (5) ರ ಜಿಲ್ಲಾಧಿಕಾರಿಗಳಿಂದ ನಿರ್ದೇಶನ ನೀಡಲು ಕೋರಿ ಸರ್ಕಾರಕ್ಕೆ ಬಂದ ಪ್ರಸ್ತಾವನೆಗಳ ಹಿನ್ನಲೆಯಲ್ಲಿ, ಮೇಲ್ಕಂಡ ಸಲ್ಲಿಸಿದ ಸುತ್ತೋಲೆಯಲ್ಲಿ "ನ್ಯಾಯಾಲಯದಲ್ಲಿ ಆದೇಶವಾಗಿದ್ದು, ಅಂತಿಮ ಸ್ವರೂಪ ಪಡೆದುಕೊಂಡ ಪ್ರಕರಣಗಳಲ್ಲಿ, ಮೂಲ ಸಾಗುವಳಿ ಚೀಟಿ ವಿತರಣಾ ವಹಿ ಇರುವ ಪ್ರಕರಣಗಳಲ್ಲಿ ಮಾತ್ರ ಗೈರು ಮಿಲೇ ಕಡತ ಪುನರ್ ನಿರ್ಮಾಣ ಮಾಡಲು ಮೂಲ ಸಾಗುವಳಿ ಚೀಟಿ ವಿತರಣಾ ವಹಿ ಅಥವಾ ಮೂಲ ಮಂಜೂರಿ ವಹಿಗಳಲ್ಲಿ ಯಾವುದಾದರೊಂದನ್ನು ಪರಿಗಣಿಸಿ ಗೈರು ಮಿಲೇ ಕಡತ ಪುನರ್ ನಿರ್ಮಾಣ ಮಾಡಿ ಮೋಜಿಣಿ ಮಾಡಬಹುದು" ಎಂದು ಸೂಚಿಸಲಾಗಿತ್ತು.

ಮುಂದುವರೆದು, ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(3) ರಡಿ ಸರ್ಕಾರಿ ಜಮೀನುಗಳಲ್ಲಿ ಮಂಜೂರಾದ ಪ್ರಕರಣಗಳ ಬಾಬ್ತು ಮಂಜೂರಿ ನೈಜತೆ ಬಗ್ಗೆ ಜಿಲ್ಲಾಧಿಕಾರಿಗಳು/ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡ ರಿವಿಷನ್ ಅರ್ಜಿಗಳ ಬಾಬ್ತು ಮಂಜೂರಿ ನೈಜತೆಯನ್ನು ಪರಿಶೀಲಿಸಿ, ಮಂಜೂರಿದಾರರ/ ಕ್ರಯದಾರರ ಪಕ್ಕನ್ನು ಸ್ಥಿರೀಕರಿಸಿ, ಖಾತೆ ಮುಂದುವರೆಸಲು ಹಾಗೂ ಮೋಡಿ ಮಾಡಬಹುದೆಂದು ಆದೇಶಿಸಲಾಗಿರುವ ಪ್ರಕರಣಗಳಲ್ಲಿ ಪೋಡಿ ದುರಸ್ಥಿ ಕುರಿತು ಘನ ಉಚ್ಛ ನ್ಯಾಯಾಲಯದಲ್ಲಿ ಅನೇಕ ಪ್ರಕರಣಗಳು ದಾಖಲಾಗಿ, ತುರ್ತಾಗಿ ಪೋಡಿ ಕೆಲಸ ನಿರ್ವಹಿಸುವಂತೆಯೂ ಆದೇಶಗಳು ಬಂದಿರುವ ಉದಾಹರಣೆಗಳು ಕೆಳಕಂಡಂತೆ ಇರುತ್ತವೆ :-

i) ಕರ್ನಾಟಕ ರಾಜ್ಯ ಘನ ಉಚ್ಛ ನ್ಯಾಯಾಲಯದ W.P No.17413/2014 (KLR/RR/SUR) ದಿನಾಂಕ: 02-07-2014 ಶ್ರೀಮತಿ ಕಮಲಾರಾಮನ್ ಕೋಂ ದಾ॥ ಜೆ.ರಾಮನ್ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು.

ii) ಮಾನ್ಯ ಉಚ್ಛ ನ್ಯಾಯಾಲಯದ W.P No.710/2014 (KLR-RES) ದಿನಾಂಕ:07-01-2014 ಶ್ರೀ ವಿ.ಎಸ್ ರವಿಶಂಕರ್ ಬಿನ್ ಲೇ॥ ಶ್ರೀನಿವಾಸ್ ವಿರುದ್ಧ ಕಾರ್ಯದರ್ಶಿಗಳು, ರಾಜ್ಯ ಸರ್ಕಾರ, ಕಂದಾಯ ಇಲಾಖೆ ಮತ್ತು ಇತರರು.

iii) ಮಾನ್ಯ ಉಚ್ಛ ನ್ಯಾಯಾಲಯದ W.P.No.1234/2014(KLR-RES) ದಿನಾಂಕ:20-01-2014 ಶ್ರೀ ಯಲ್ಲಪ್ಪ ಬಿನ್ ಅಣ್ಣಪ್ಪ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು.

iv) ಮಾನ್ಯ ಉಚ್ಛ ನ್ಯಾಯಾಲಯದ W.P No.26793/2014(LR-SEC 48-A) ದಿನಾಂಕ: 23-06-2014 ಶ್ರೀ ಮುರಳಿ ಲಾಲ್ ಸರೋಗಿ ಬಿನ್ ಲೇ॥ ಬಚಾರಿ ಲಾಲ್ ಜೈನ್ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು.

ಆದಾಗ್ಯೂ ರಾಜ್ಯದಲ್ಲಿ ದರಖಾಸ್ತು ಹಾಗೂ ಇನಾಂ ಮಂಜೂರಾತಿ ಜಮೀನುಗಳ ಪೋಡಿ ದುರಸ್ಥಿ ಪ್ರಕ್ರಿಯೆಯಲ್ಲಿ ಸರ್ಕಾರದ ಹಾಗೂ ಭೂಮಾಪನ ಇಲಾಖಾ ಆಯುಕ್ತರ ಪ್ರಸ್ತುತ ಅಸ್ತಿತ್ವದಲ್ಲಿರುವ ಸುತ್ತೋಲೆಗಳನ್ವಯ ಮಂಜೂರಿದಾರರಿಗೆ/ರೈತರಿಗೆ ವೈಯುಕ್ತಿಕವಾಗಿ ಮಾರಾಟ ಮಾಡಲು ತುರ್ತು ಅನಿವಾರ್ಯ ಹೊಂದಿರುವವರಿಗೆ ಹಾಗೂ ಸಾಲ ಪಡೆಯಲು ಉದ್ದೇಶಿಸಿರುವ ಮಂಜೂರಿದಾರರಿಗೆ ತೀರಾ ತೊಂದರೆಯಾಗುತ್ತಿರುವುದನ್ನು ವಿಧಾನ ಮಂಡಲದ ಸದನಗಳಲ್ಲಿ ಅಲ್ಲದೆ ವಿವಿಧ ವಲಯಗಳಲ್ಲಿ ಪ್ರಸ್ತಾಪವಾಗಿದೆ. ಹಾಗೂ ಈ ಸುತ್ತೋಲೆಗಳನ್ನು ಹಿಂಪಡೆದು/ಮಾರ್ಪಡಿಸಿ ತುರ್ತಾಗಿ ಪೋಡಿ ಆಗಬೇಕಾಗಿರುವ ಬಡ ರೈತರಿಗೆ/ಮಂಜೂರಿದಾರರಿಗೆ ಶೀಘ್ರ ಪೋಡಿ ಮಾಡಲು ಅನುವಾಗುವಂತೆ ಸರಳ ವಿಧಾನವನ್ನು ಕಾರ್ಯವಿಧಾನವನ್ವಯ ಅನುಸರಿಸಬೇಕೆಂದು ಕೋರಿರುತ್ತಾರೆ.

Scanned with CamScanne

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಉಲ್ಲೇಖಿತ (1)ರ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ **ಸಂಖ್ಯೆ: 19100/2015–ಶ್ರೀ ರವಿಶಂಕರ್ V/s ರಾಜ್ಯ ಸರ್ಕಾರ** ಮತ್ತು ಇತರರು– ಈ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, **ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ** ಮನವರ್ತೆ ಕಾವಲ್ ಗ್ರಾಮದ ಸ.ನಂ.7 ರಲ್ಲಿನ ಜಮೀನಿನ ಪೋಡಿ ದುರಸ್ತಿ ಮಾಡುವ ಬಗ್ಗೆ ಗೈರುವಿಲೇ ಕಡತ ತಯಾರಿಸುವ ಕುರಿತು ಘನ ಉಚ್ಚ ನ್ಯಾಯಾಲಯವು ನೀಡಿದ ದಿನಾಂಕ: 30-11-2015ರ ಆದೇಶದಲ್ಲಿ ಮಂಜೂರಿ ಪ್ರಕರಣಗಳ ಪೋಡಿ ದುರಸ್ತಿಗೆ ಸಂಬಂಧಿಸಿದಂತೆ, ಸರ್ಕಾರದಿಂದ/ಇಲಾಖಾ ಆಯುಕ್ತರಿಂದ ಹೊರಡಿಸಲಾದ ಸುತ್ತೋಲೆಗಳ ಸೂಚನೆಗಳನ್ನು ತಕ್ಷಣ ಸರಳೀಕರಿಸುವಂತೆ ಹಾಗೂ ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ರಿಜಿಸ್ಟ್ರಾರ್ ಜನರಲ್, ರಾಜ್ಯ ಉಚ್ಚ ನ್ಯಾಯಾಲಯ ರವರಿಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಹಾಗೂ ಸಾರ್ವಜನಿಕ ಹಿತದೃಷ್ಠಿಯಿಂದ ಉಲ್ಲೇಖಿತ (2) ರಿಂದ (8) ರವರೆಗೆ ಸರ್ಕಾರದಿಂದ/ ಭೂಮಾಪನಾ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಸರಳೀಕರಿಸುವ ನಿಟ್ಟಿನಲ್ಲಿ [redacted]:-

(1) ಕರ್ನಾಟಕ ಭೂಕಂದಾಯ ನಿಯಮಗಳು, 1966 ರ ನಿಯಮ 72 ರ ಪ್ರಕಾರ ಈ ಹಿಂದಿನಿಂದಲೂ ಜಾರಿಯಲ್ಲಿರುವಂತೆ ಮಂಜೂರಿ ಜಮೀನಿನಲ್ಲಿ ಆರ್.ಟಿ.ಸಿ ಮತ್ತು ಮ್ಯುಟೇಷನ್ ನಲ್ಲಿ ದಾಖಲಾಗಿರುವ ವಿಸ್ತೀರ್ಣ ಮತ್ತು ಅನುಭವವನ್ನು ಕರ್ನಾಟಕ ಭೂಕಂದಾಯ ನಿಯಮಗಳು, 1966 ರ ನಿಯಮ 50 ರಂತೆ ತಾಳೆ ಮಾಡಿಕೊಂಡು ಮೂಲ ಮಂಜೂರಿ ಕಡತದೊಂದಿಗೆ ಭೂದಾಖಲೆಗಳ ಉಪನಿರ್ದೇಶಕರು ಪೋಡಿ ಕೆಲಸವನ್ನು ನಿರ್ವಹಿಸುವುದು. ಈ ರೀತಿ ಕ್ರಮ ಜರುಗಿಸುವಾಗ [redacted] ಮಾಡಿ, ಅನುಭವವನ್ನು ಖಾತ್ರಿಪಡಿಸಿಕೊಂಡು, ಭೂದಾಖಲೆಗಳ ಉಪನಿರ್ದೇಶಕರು ಪೋಡಿ ಕೆಲಸವನ್ನು ನಿರ್ವಹಿಸುವುದು.

(2) ಮೂಲ ಮಂಜೂರಿ ಕಡತ ಲಭ್ಯವಿದ್ದ ಪ್ರಕರಣಗಳಲ್ಲಿ ತುರ್ತು ಮತ್ತು ಅನಿವಾರ್ಯ ಸಂದರ್ಭದಲ್ಲಿ ಏಕವ್ಯಕ್ತಿ ಕೋರಿಕೆ ಮೇರೆಗೆ ಪೋಡಿ ಮಾಡಲು, ಪೋಡಿ ಪೂರ್ವಾನುಮತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಬದಲಾಗಿ ಆಯಾ ಜಿಲ್ಲೆಯ [redacted]. → [illegible] 18/8/16

(3) ಮೂಲ ಮಂಜೂರಿ ಕಡತ ಲಭ್ಯವಿದ್ದು, ಮಂಜೂರಿ ನೈಜತೆಯನ್ನು ಸಾದೀಕು ಪಡಿಸುವ ವಹಿಗಳು ಶಿಥಿಲವಾಗಿದ್ದಲ್ಲಿ ಅಥವಾ ಲಭ್ಯವಿಲ್ಲದೇ ಇದ್ದಲ್ಲಿ, ಸದರಿ ಮಂಜೂರಿಯ ನೈಜತೆಯನ್ನು ಸಕ್ಷಮ ಮಂಜೂರಿ ವಹಿಗಳ ನಿರ್ವಹಣಾ ಪ್ರಾಧಿಕಾರಿಗಳಾದ ತಹಶೀಲ್ದಾರ್/ಉಪವಿಭಾಗಾಧಿಕಾರಿ/ ಜಿಲ್ಲಾಧಿಕಾರಿಗಳಿಂದ ಸ್ಪಷ್ಟ ವರದಿ ಪಡೆದು ನಿಯಮಾನುಸಾರ [redacted]

(4) ಮೂಲ ಮಂಜೂರಿ ಕಡತ ಲಭ್ಯವಿಲ್ಲದೇ ಇದ್ದ ಪ್ರಕರಣಗಳಲ್ಲಿ, ಉಲ್ಲೇಖ (3) ಮತ್ತು (5) ರ ಸರ್ಕಾರದ ಸುತ್ತೋಲೆಗಳಲ್ಲಿ ನೀಡಲಾದ ಸೂಚನೆಗಳಿಗೆ ಬದಲಾಗಿ ಗೈರುವಿಲೇ ಕಡತ ತಯಾರಿಸುವಾಗ ಜಿಲ್ಲಾಮಟ್ಟದ ಗೈರುವಿಲೇ ಕಡತಗಳ ಪುನರ್ ನಿರ್ಮಾಣದ ಸಮಿತಿಯು ಮೂಲ ಸಾಗುವಳಿ ಚೀಟಿ ವಿತರಣಾ ವಹಿ ಅಥವಾ ಮೂಲ ಮಂಜೂರಿ (ದರಖಾಸ್ತು) ವಹಿಗಳಲ್ಲಿ ಮಂಜೂರಾತಿ ವಿವರ ಲಭ್ಯವಿರುವುದನ್ನು ಖಾತ್ರಿಪಡಿಸಿಕೊಂಡು, ಮಂಜೂರಿ ನೈಜತೆ ಬಗ್ಗೆ ಇತರೆ ವಹಿಗಳಲ್ಲಿ ಅಂದರೆ, ಉಲ್ಲೇಖ (3) ರ ಸುತ್ತೋಲೆಯ ಕಂಡಿಕೆ (12) (e) ರಲ್ಲಿ ವಿವರಿಸಿದ ಇತರೆ ಕಂದಾಯ ದಾಖಲೆಗಳ ಆಧಾರದಿಂದ ಮಂಜೂರಿ ನೈಜತೆಯನ್ನು ಖಾತ್ರಿಪಡಿಸಿಕೊಂಡು, [redacted]

Scanned with CamScanner

(5) ಗೈರುವಿಲೇ ಕಡತಗಳ ಪುನರ್ ನಿರ್ಮಾಣದ ಹಂತದಲ್ಲಿ ಮಂಜೂರಿಯ ನೈಜತೆ ಸಾಬೀತು ಪಡಿಸುವ ಎರಡು ವಹಿಗಳು ಲಭ್ಯವಿಲ್ಲದೇ, ಅವುಗಳಲ್ಲಿ ಯಾವುದಾದರೂ ಒಂದು ವಹಿ ಲಭ್ಯವಿದ್ದ ಸಂದರ್ಭದಲ್ಲಿ ಹಾಗೂ ಸದರಿ ಮಂಜೂರಿ ನೈಜತೆ ಕುರಿತಂತೆ ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ ಕಲಂ 136(3) ರ ಅಡಿ ಪ್ರಕರಣ ದಾಖಲಾಗಿ, ಜಿಲ್ಲಾಧಿಕಾರಿಗಳ/ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಮಂಜೂರಿ ನೈಜತೆಯಿಂದ ಕೂಡಿದೆ ಎಂದು ಕಲಂ 136(3) ಅಡಿ ದಾಖಲಾದ ಪ್ರಕರಣ ಕೈಬಿಟ್ಟು, ಸದರಿ ಮಂಜೂರಿಗೆ ಸಂಬಂಧಿಸಿದ ಆರ್.ಟಿ.ಸಿ ದಾರರ ಖಾತೆಯನ್ನು ಮುಂದುವರೆಸಲು ಹಾಗೂ ಪೋಡಿ ದುರಸ್ತಿ ಮಾಡಬೇಕೆಂದು ಆದೇಶವಾದ ಪ್ರಕರಣಗಳಲ್ಲಿ ಲಭ್ಯವಿರುವ ಒಂದು ವಹಿ ಹಾಗೂ ಇತರ ಪೂರಕ ಕಂದಾಯ ದಾಖಲೆಗಳ ಆಧಾರದಿಂದ ಮಂಜೂರಿ ನೈಜತೆ ಖಾತ್ರಿಪಡಿಸಿಕೊಂಡು, ಗೈರುವಿಲೇ ಕಡತ ಪುನರ್ ನಿರ್ಮಾಣದ ಬಗ್ಗೆ ತೀರ್ಮಾನಿಸುವುದು.

(6) ಪೋಡಿ ದುರಸ್ತಿಗೆ ಸಂಬಂಧಿಸಿದಂತೆ, ಮಂಜೂರಿ ನೈಜತೆ ಸಾಬೀತುಪಡಿಸುವ ಎರಡು ವಹಿಗಳಲ್ಲಿ ಯಾವುದಾದರೊಂದು ವಹಿ ಲಭ್ಯವಿದ್ದು, ಮೂಲ ಮಂಜೂರಿ ಕಡತ ಲಭ್ಯವಿಲ್ಲದೇ ಗೈರುವಿಲೇ ಕಡತ ತಯಾರಿಸುವ ಸಂದರ್ಭದಲ್ಲಿ ಘನ ನ್ಯಾಯಾಲಯಗಳಿಂದ ಪೋಡಿ ದುರಸ್ತಿ ಬಗ್ಗೆ ಆದೇಶವಾಗದೇ ಇದ್ದ ಪ್ರಕರಣಗಳಲ್ಲೂ, ಇತರೆ ಪೂರಕ ಕಂದಾಯ ದಾಖಲೆಗಳ ಆಧಾರದಿಂದ ಮಂಜೂರಿ ನೈಜತೆ ಖಾತ್ರಿಪಡಿಸಿಕೊಂಡು, ಗೈರುವಿಲೇ ಕಡತ ಪುನರ್ ನಿರ್ಮಾಣದ ಬಗ್ಗೆ ತೀರ್ಮಾನಿಸುವುದು.

(7) ಮೂಲ ಮಂಜೂರಿ ವಹಿ ಹಾಗೂ ಸಾಗುವಳಿ ಚೀಟಿ ವಿತರಣಾ ವಹಿಗಳು ಸಂಬಂಧಿಸಿದ ತಹಶೀಲ್ದಾರ್ ಕಛೇರಿಗಳಲ್ಲಿ ಲಭ್ಯವಿಲ್ಲದೇ ಶಿಥಿಲವಾಗಿದ್ದಲ್ಲಿ, ಸದರಿ ಜಮೀನು ಮಂಜೂರಾದ ಕಾಲದಿಂದಲೂ ಹಕ್ಕು ದಾಖಲೆಗಳಲ್ಲಿ ಅಂದರೆ, ಕೇತುವಾರು ವಹಿ, ಎ.ಎಲ್ ವಹಿ, ಸೆಟ್ಲಮೆಂಟ್ ವಹಿ, ಆರ್.ಆರ್ ವಹಿ, ಮ್ಯುಟೇಷನ್ ವಹಿ ಹಾಗೂ ಆರ್.ಟಿ.ಸಿ ಗಳಲ್ಲಿ ನಿರಂತರವಾಗಿ ಹಕ್ಕು ದಾಖಲಾಗಿರುವ ಬಗ್ಗೆ ಯಾವುದು ಲಭ್ಯವಿದೆಯೋ ಆ ದಾಖಲೆಯನ್ನು ಆಧರಿಸಿ, ಮಂಜೂರಿ ನೈಜತೆ ಖಾತ್ರಿಯಾದಲ್ಲಿ ಜಿಲ್ಲಾಮಟ್ಟದ ಸಮಿತಿಯು ಗೈರುವಿಲೇ ಕಡತ ತಯಾರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಬಹುದಾಗಿರುತ್ತದೆ.

ಇನಾಂ ಗ್ರಾಮಗಳಲ್ಲಿ ಕರ್ನಾಟಕ (Personal and Miscellaneous) ಇನಾಂ ಅಬಾಲಿಷನ್ ಕಾಯ್ದೆ ಅಡಿ ವಿಶೇಷ ಜಿಲ್ಲಾಧಿಕಾರಿಗಳು, ಸರ್ಕಾರಿ ಜಮೀನಿನಲ್ಲಿ, ಮಂಜೂರು ಮಾಡಿದ ಪ್ರಕರಣಗಳಲ್ಲಿ ಇದುವರೆಗೆ ಸರ್ವೆ ದಾಖಲೆಗಳಲ್ಲಿ ಪೋಡಿ ದುರಸ್ತಿಯಾಗದೇ ಬಾಕಿ ಇರುವ ಪ್ರಕರಣಗಳಲ್ಲಿ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿತ(8) ರ ದಿನಾಂಕ: 12-03-2013 ರ ಆಯುಕ್ತರು, ಭೂಮಾಪನ ರವರ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿದ್ದು, ಈ ಸಂಬಂಧಿಸಿದ ಗೈರುವಿಲೇ ಕಡತಗಳಲ್ಲಿ ಜರುಗಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖ (6) ರ ದಿನಾಂಕ: 31-07-2013 ರ ಆಯುಕ್ತರು, ಭೂಮಾಪನ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ. ಆದರೆ, ಈ ಬಗ್ಗೆ ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯಲ್ಲಿ ಯಾವುದೇ ಪ್ರಸ್ತಾಪವಿರುವುದಿಲ್ಲ. ಆದ್ದರಿಂದ ಉಲ್ಲೇಖ (7) ರ ಆಯುಕ್ತರ ಸುತ್ತೋಲೆಯಲ್ಲಿನ ಅಂಶಗಳನ್ನು ಈ ಕೆಳಗಿನಂತೆ ಮಾರ್ಪಡಿಸಿದೆ :-

(ಎ) ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳಿಂದ ಮಂಜೂರಾದ ಮಂಜೂರಿ ಕಡತ ತಹಶೀಲ್ದಾರ್ ಕಛೇರಿಯಲ್ಲಿ ಲಭ್ಯವಿದ್ದು, ಅದರಲ್ಲಿ ಯಾವುದಾದರೊಂದು ದಾಖಲಾತಿ ಲಭ್ಯವಿಲ್ಲದೇ ಇದ್ದಲ್ಲಿ, ಸದರಿ ಪ್ರಕರಣವನ್ನು ಗೈರುವಿಲೇ ಪ್ರಕರಣವೆಂದು ಪರಿಗಣಿಸಲು ಬರುವುದಿಲ್ಲ. ಸದರಿ ಮಂಜೂರಾತಿ ಕುರಿತು ಲಭ್ಯವಿರುವ ಇತರೆ ಪೂರಕ ಕಂದಾಯ ದಾಖಲೆಗಳ ಆಧಾರದಿಂದ ನೈಜತೆಯನ್ನು ಖಾತ್ರಿಪಡಿಸಿಕೊಂಡು ಅಥವಾ ಈ ಬಗ್ಗೆ ಜಿಲ್ಲಾಧಿಕಾರಿಗಳು/ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 136(3) ರ ಅಡಿ ನೈಜತೆ ಖಾತ್ರಿಪಡಿಸಿಕೊಂಡ ಆದೇಶಕ್ಕನುಗುಣವಾಗಿ, ಇನಾಂ ಮಂಜೂರಿ ಕಡತದಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದಿಂದ ಪೋಡಿ ದುರಸ್ತಿ ಬಗ್ಗೆ ಕ್ರಮ ಜರುಗಿಸುವುದು.

ಬಿ) ಇನಾಂ ರದ್ದಿಯಾತಿ ವಿಶೇಷ ಜಿಲ್ಲಾಧಿಕಾರಿಗಳಿಂದ ಮಂಜೂರಾದ ಮಂಜೂರಿ ಕಡತ ತಹಶೀಲ್ದಾರ್ ಕಛೇರಿಯಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ, ಸದರಿ ಮಂಜೂರಿಯ ನೈಜತೆಯನ್ನು ಸಾಬೀತು ಪಡಿಸುವ ನಮೂನೆ 8ರ ವಹಿಯಲ್ಲಿನ ನಮೂದುಗಳ ಆಧಾರದಿಂದ ಗೈರುವಿಲೇ ಕಡತ ತಯಾರಿಸುವ ಬಗ್ಗೆ ಕ್ರಮ ಜರುಗಿಸುವುದು. ಒಂದು ವೇಳೆ ನಮೂನೆ 8 ರ

-5

Scanned with CamScanne

[illegible] ಬಗ್ಗೆ [illegible]
[illegible] ಮಂಡಳಿ/ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಕ್ಕನುಗುಣವಾಗಿ ಹಾಗೂ ಸದರಿ ಮಂಜೂರಾತಿ ಕುರಿತು ಲಭ್ಯವಿರುವ ಇತರೆ ಪರ್ಯಾಯ ಕಂದಾಯ ದಾಖಲೆಗಳ ಆಧಾರದಿಂದ ನೈಜತೆಯನ್ನು ಖಾತ್ರಿಪಡಿಸಿಕೊಂಡು ಅಥವಾ ಈ ಬಗ್ಗೆ ಜಿಲ್ಲಾಧಿಕಾರಿಗಳು/ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 136(3) ರ ಅಡಿ ನೈಜತೆ ಖಾತ್ರಿಪಡಿಸಿಕೊಂಡ ಆದೇಶಕ್ಕನುಗುಣವಾಗಿ, ಗೈರುವಿಲೇ ಕಡತ ತಯಾರಿಸುವ ಬಗ್ಗೆ ಕ್ರಮ ಜರುಗಿಸಿ, ತದನಂತರ ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 67(2) ರ ಅಡಿ ಸಕ್ಷಮ ಪ್ರಾಧಿಕಾರದ ಸೂಕ್ತ ಆದೇಶದೊಂದಿಗೆ ಪೋಡಿ ದುರಸ್ತಿ ಬಗ್ಗೆ ಕ್ರಮ ಜರುಗಿಸುವುದು.

ಈ ಮೇಲ್ಕಂಡ ಸುತ್ತೋಲೆಯಲ್ಲಿನ ಅಂಶಗಳು ನಕಲಿ ದಾಖಲೆಗಳ, ಸೇರ್ಪಡೆಗೊಳಿಸಿದ ದಾಖಲೆಗಳ ಹಾಗೂ ಸರ್ಕಾರಿ ದಾಖಲೆಗಳಲ್ಲಿ ಕೆರೆದು ತಿದ್ದಿದ ಪ್ರಕರಣಗಳಲ್ಲಿ ಗೈರುವಿಲೇ ಕಡತ ಪುನರ್ ನಿರ್ಮಾಣ ಮಾಡುವಾಗ ಉಲ್ಲೇಖ (3) ರ ಸುತ್ತೋಲೆಯ ಕಂಡಿಕೆ (12) (e) ರಲ್ಲಿ ವಿವರಿಸಿರುವಂತೆಯೇ ಕ್ರಮ ಜರುಗಿಸುವುದು. ಯಾವುದೇ ಕಾರಣಕ್ಕೂ ಸರ್ಕಾರಿ ಆಸ್ತಿಗೆ ಧಕ್ಕೆಯಾಗದಂತೆ ಗೈರುವಿಲೇ ಕಡತ ಪುನರ್ ನಿರ್ಮಾಣದ ಬಗ್ಗೆ ಅತೀ ಜಾಗರೂಕತೆಯಿಂದ ಕ್ರಮ ಜರುಗಿಸಿ, ಗೈರುವಿಲೇ ಕಡತ ಪುನರ್ ನಿರ್ಮಾಣ ಮಾಡಿ, ಪೋಡಿ ಮಾಡಬಹುದೆಂದು ಸೂಚಿಸಲಾಗಿದೆ. ಉಳಿದಂತೆ ಉಲ್ಲೇಖ (3) ರ ಸುತ್ತೋಲೆಯ ಎಲ್ಲಾ ಅಂಶಗಳು ಈ ಹಿಂದಿನಂತೆಯೇ ಜಾರಿಯಲ್ಲಿರುತ್ತವೆ ಎಂದು ಸ್ಪಷ್ಟ ಪಡಿಸಿದೆ.

ಸದರಿ ಸುತ್ತೋಲೆಯಲ್ಲಿನ ಸೂಚನೆಗಳನ್ನು ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕಟ್ಟುನಿಟ್ಟಾಗಿ ಯಾವುದೇ ಲೋಪಗಳಿಲ್ಲದೆ ಪಾಲಿಸತಕ್ಕದ್ದು ಹಾಗೂ ಈ ಸೂಚನೆಗಳು ಪಾಲನೆ ಆಗುವ ಬಗ್ಗೆ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರುಗಳು ಮೇಲ್ವಿಚಾರಣೆ ನಡೆಸತಕ್ಕದ್ದು.

ಸದರಿ ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

(ಡಾ: ಬಿ.ಬಸವರಾಜು)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ.

ಇವರಿಗೆ:

1) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
2) ಮಹಾ ಪರಿವೀಕ್ಷಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು.
3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ.
4) ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5) ಭೂದಾಖಲೆಗಳ ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಬೆಂಗಳೂರು/ಉತ್ತರ ವಲಯ, ಬೆಳಗಾಂ.
6) ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ.
7) ಎಲ್ಲಾ ಜಿಲ್ಲಾ ನೊಂದಣಾಧಿಕಾರಿಗಳು.
8) ಎಲ್ಲಾ ಉಪ ನೊಂದಣಾಧಿಕಾರಿಗಳು.
9) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ.
10) ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರು (ಕಾ.ನಿ).
11) ಎಲ್ಲಾ ತಹಶೀಲ್ದಾರರುಗಳಿಗೆ.
12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು:

1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಭೂಸುಧಾರಣೆ, ಭೂಮಂಜೂರಾತಿ), ಬಹುಮಹಡಿ ಕಟ್ಟಡ, ಬೆಂಗಳೂರು.
4) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಸಮನ್ವಯ), ಬಹುಮಹಡಿ ಕಟ್ಟಡ, ಬೆಂಗಳೂರು.(ವಾರ್ಷಿಕ ಕಾಂಪೆಂಡಿಯಮ್‌ಗಾಗಿ)
5) ಎಲ್ಲಾ ಉಪ/ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.

Scanned with CamScanner

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂ.ಇ 08 ಎಲ್.ಜಿ.ಪಿ. 2016 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:18.07.2016.

## ತಿದ್ದುಪಡಿ

ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 08 ಎಲ್‌ಜಿಪಿ 2016 ದಿನಾಂಕ: 20.06.2016 ರಂದು ಭೂ ಮಂಜೂರಾತಿ ಪ್ರಕರಣಗಳ ಮಿಸ್ಸಿಂಗ್ ಕಡತಗಳ ನಿರ್ವಹಣೆ ಬಗ್ಗೆ ಸರಳೀಕರಣ ನಿಟ್ಟಿನಲ್ಲಿ ಹೊರಡಿಸಲಾದ ಸುತ್ತೋಲೆಯ ಪುಟ ಸಂಖ್ಯೆ 3 ರ ಉಪ ಕಂಡಿಕೆ (2) ರಲ್ಲಿ ಮೂಲ ಮಂಜೂರಾತಿ ಕಡತ ಲಭ್ಯವಿದ್ದ ಪ್ರಕರಣಗಳಲ್ಲಿ ತುರ್ತು ಮತ್ತು ಅನಿವಾರ್ಯ ಸಂದರ್ಭದಲ್ಲಿ ಏಕ ವ್ಯಕ್ತಿ ಕೋರಿಕೆ ಮೇರೆಗೆ ಪೋಡಿ ಮಾಡಲು, ಪೋಡಿ ಪೂರ್ವಾನುಮತಿ ನೀಡುವ ಅಧಿಕಾರಿವನ್ನು ಜಿಲ್ಲಾಧಿಕಾರಿಗಳಿಗೆ ಬದಲಾಗಿ ಆಯಾ ಡಿ.ಡಿ.ಎಲ್.ಆರ್.ಗಳಿಗೆ ನೀಡುವುದು ಎಂದು ತಿಳಿಸಲಾಗಿದ್ದು, **"ಡಿ.ಡಿ.ಎಲ್.ಆರ್"** ಎಂಬ ಪದಗಳ ಬದಲಾಗಿ **"ತಹಶೀಲ್ದಾರ್"** ಎಂದು ಹಾಗೂ **"ತಾಲ್ಲೂಕಿನ ಸಹಾಯಕ ನಿರ್ದೇಶಕರು, ಭೂ-ದಾಖಲೆಗಳ ಇಲಾಖೆ ಇವರ ಸಹಕಾರ/ಸಮನ್ವಯದೊಂದಿಗೆ ತಹಶೀಲ್ದಾರ್‌ರವರು ಏಕ ವ್ಯಕ್ತಿ ಪೋಡಿ ಪ್ರಕರಣಗಳನ್ನು ನಿರ್ವಹಿಸುವುದು ಮತ್ತು ಇದಕ್ಕಾಗಿ ಜಿಲ್ಲಾಧಿಕಾರಿಯವರ ಪೂರ್ವಾನುಮತಿಯನ್ನು ಪಡೆಯುವ ಅಗತ್ಯವಿಲ್ಲ"** ಎಂಬ ಸೇರ್ಪಡೆಯೊಂದಿಗೆ ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು, ಉಳಿದಂತೆ ಸುತ್ತೋಲೆ ಸಂಖ್ಯೆ: ಆರ್‌ಡಿ 08 ಎಲ್‌ಜಿಪಿ 2016 ದಿನಾಂಕ: 20.06.2016 ರಂದು ಹೊರಡಿಸಲಾದ ಸುತ್ತೋಲೆಯಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

18.7.16
(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

**ಇವರಿಗೆ:**

1) ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
2) ಮಹಾ ಪರಿವೀಕ್ಷಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು.
3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ.
4) ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5) ಭೂದಾಖಲೆಗಳ ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಬೆಂಗಳೂರು/ಉತ್ತರ ವಲಯ, ಬೆಳಗಾಂ.
6) ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ.
7) ಎಲ್ಲಾ ಜಿಲ್ಲಾ ನೊಂದಣಾಧಿಕಾರಿಗಳು.
8) ಎಲ್ಲಾ ಉಪ ನೊಂದಣಾಧಿಕಾರಿಗಳು.
9) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ.
10) ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರು (ಕಾ.ನಿ).
11) ಎಲ್ಲಾ ತಹಶೀಲ್ದಾರರುಗಳಿಗೆ.

(6 ರಿಂದ 11) **(ಜಿಲ್ಲಾಧಿಕಾರಿಗಳ ಮೂಲಕ)**

12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು:**

1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಭೂಸುಧಾರಣೆ, ಭೂಮಂಜೂರಾತಿ), ಬಹುಮಹಡಿ ಕಟ್ಟಡ, ಬೆಂಗಳೂರು.
4) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, (ಸಮನ್ವಯ), ಬಹುಮಹಡಿ ಕಟ್ಟಡ, ಬೆಂಗಳೂರು.(ವಾರ್ಷಿಕ ಕಾಂಪೆಂಡಿಯಮ್‌ಗಾಗಿ)
5) ಎಲ್ಲಾ ಉಪ/ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.